# ವೈರುಧ್ಯದ ಸಂಗತಿಗಳು ಒಂದಾಗುವ ಸೋಜಿಗ

**ನಾಗತಿಹಳ್ಳಿ ಚಂದ್ರಶೇಖರ್ ಅವರ ಹದಿನೈದನೇ ಸಿನಿಮಾ 'ಇಂಡಿಯಾ ವರ್ಸಸ್ ಇಂಗ್ಲೆಂಡ್' ಜ. 24ಕ್ಕೆ ತೆರೆಗೆ ಬರುತ್ತಿದೆ. ಆ ಸಿನಿಮಾ ರೂಪುಗೊಂಡ ಬಗೆ, ಆ ಕಥೆಯ ಹಿಂದಿನ ತಾತ್ವಿಕತೆಯ ಕುರಿತು ಮೇಷ್ಟ್ರು ಇಲ್ಲಿ ಮಾತಾಡಿದ್ದಾರೆ.**

■ **ಪದ್ಮನಾಭ ಭಟ್**

ಚಿತ್ರ: ಎಸ್.ಕೆ. ದಿನೇಶ್

**◆ ಮೂರು ವರ್ಷಗಳ ನಂತರ ಮತ್ತೆ ನಿಮ್ಮ ನಿರ್ದೇಶನದ ಸಿನಿಮಾವೊಂದು ತೆರೆಗೆ ಬರುತ್ತಿದೆ. ಈ ಅಂತರ ಉದ್ದೇಶಪೂರ್ವಕವೇ?**

ಈ ಚಿತ್ರದ ಕ್ಯಾನ್ವಾಸ್ ತುಂಬ ದೊಡ್ಡದು. ಸಾಕಷ್ಟು ಸಂಶೋಧನೆಯ ಅಗತ್ಯ ಇತ್ತು. ಒಂದು ಕಡೆ ಅಂಡಮಾನ್‌ನಿಂದ ಅಮೃತಸರದವರೆಗೆ ಈ ಕಥೆ ಸಂಚರಿಸುತ್ತದೆ. ಇನ್ನೊಂದು ಕಡೆ ಲಂಡನ್‌ನಲ್ಲಿ ನಡೆಯುವ ಕಥೆ ಇದೆ. ಯಾವುದೋ ಫಾರಿನ್ ಲೊಕೇಶನ್‌ಗೆ ಹೋಗಿ ಹಾಡು ಚಿತ್ರೀಕರಿಸಿಕೊಂಡು ಬರುವ ಬಗೆಯ ಕಥೆ ಅಲ್ಲ ಅದು. ಆ ದೇಶದ ಮನುಷ್ಯರ ಚರಿತ್ರೆಯ ವಿಚಾರಗಳನ್ನು ಹೇಳುವ ಅಗತ್ಯ ಇತ್ತು. ಇದು ದೊಡ್ಡ ಬಜೆಟ್‌ನ ಸಿನಿಮಾವೂ ಹೌದು. ಆ ವ್ಯವಹಾರದ ಕೆಲಸಗಳಿಗೂ ಸಾಕಷ್ಟು ಸಮಯ ಹಿಡಿಯಿತು.

**◆ ಇದು ಇದುವರೆಗಿನ ನಿಮ್ಮ ನಿರ್ದೇಶನ ಹಿಂದಿನ ಸಿನಿಮಾಗಳಿಗಿಂತ ಹೇಗೆ ಭಿನ್ನ?**

ನಾನು ಯಾವುದೇ ಹೊಸ ಸಿನಿಮಾ ಮಾಡುವಾಗ ಅದು ಹಿಂದಿನ ಎಲ್ಲಾ ಚಿತ್ರಗಳಿಗಿಂತ ಭಿನ್ನವಾಗಿರಬೇಕು ಎಂದು ಪ್ರಜ್ಞಾಪೂರ್ವಕವಾಗಿ ಎಚ್ಚರವಹಿಸುತ್ತೇನೆ. ಹಾಗಾಗಿ 'ಉಂಡು ಹೋದ ಕೊಂಡು ಹೋದ' ಸಿನಿಮಾದಿಂದ ಇಲ್ಲಿಯವರೆಗೆ (ಅವುಗಳ ಸೋಲು ಗೆಲುವು ಏನೇ ಇದ್ದರೂ) ಅವುಗಳಲ್ಲಿ ಪುನರಾವರ್ತನೆ ಆಗದ ಹಾಗೆ ನೋಡಿಕೊಂಡಿದ್ದೇನೆ. ಇದಕ್ಕೆ ಕಾರಣ ನನ್ನಲ್ಲಿರುವ ವಿದ್ಯಾರ್ಥಿ ಮನಸ್ಸು; ಕಲಿಯುವ ಹಂಬಲ. 'ನನಗೆ ಎಲ್ಲಾ ಗೊತ್ತು; ನನಗೆ ಗೊತ್ತಿರುವುದನ್ನು ನಿಮಗೆ ಹೇಳುತ್ತಿದ್ದೇನೆ' ಎಂದು ನಾನು ಹೋಗುವುದಿಲ್ಲ. 'ಇದು ನನಗೆ ಏನೂ ಅಂತ ಗೊತ್ತಿಲ್ಲ. ತಿಳಿದುಕೊಳ್ಳುತ್ತೇನೆ' ಎಂದುಕೊಂಡೇ ನಾನು ಒಂದು ಚಿತ್ರಕಥೆಗೆ ಪ್ರವೇಶಿಸುತ್ತೇನೆ.

ಇಲ್ಲಿಯೂ ಒಂದು ಪ್ರೇಮಕಥೆ ಇದೆ. ಆದರೆ ಅದರ ಆಚೆಗೂ ಏನೋ ಒಂದಿಷ್ಟು ಹೇಳಬೇಕು ಎಂಬ ತುಡಿತ ಈ ಚಿತ್ರದಲ್ಲಿ ಕೆಲಸ ಮಾಡಿದೆ. ಎರಡು ಮೂರು ಪದರಗಳಲ್ಲಿ ಕಥೆ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಒಂದು ಕ್ರೈಂ ಥ್ರಿಲ್ಲರ್ ಪದರವಿದೆ. ಎರಡು ದೇಶಗಳ ಕುರಿತಾದ ಚರಿತ್ರೆ ಸಂಸ್ಕೃತಿಯ ಜಿಜ್ಞಾಸೆ ಇರುವಂಥ ಇನ್ನೊಂದು ಪದರವೂ ಇದೆ. ವರ್ತಮಾನದಲ್ಲಿ ನಿಂತುಕೊಂಡು ಹಿಂದಕ್ಕೆ ತಿರುಗಿ, ಎರಡು ದೇಶಗಳ ಮಧ್ಯೆ ಘಟಿಸಿರುವಂಥ ಚಾರಿತ್ರಿಕ ಘಟನೆಗಳನ್ನು ಹೇಗೆ ನೋಡಬೇಕು, ಹೇಗೆ ನೋಡಬಾರದು, ಅವುಗಳನ್ನು ಈಗ ತಿದ್ದುಪಡಿ ಮಾಡಲು ಸಾಧ್ಯವೇ? ಅಥವಾ ಹಾಗೆಯೇ ಅದನ್ನು ಒಪ್ಪಿಕೊಂಡು ಹೋಗಬೇಕೇ? ಇವುಗಳ ಬಗ್ಗೆ ಭಾರತ ಏನು ಯೋಚಿಸುತ್ತದೆ? ಇಂಗ್ಲೆಂಡ್ ಏನು ಯೋಚಿಸುತ್ತದೆ... ಈ ಥರದ ಚರ್ಚೆಯನ್ನು ಹುಟ್ಟುಹಾಕುವ ಬೌದ್ಧಿಕ ಸ್ತರವೂ ಇದೆ. ಹೀಗೆ ಮೂರು ಬೇರೆ ಬೇರೆ ಸ್ತರಗಳಲ್ಲಿ ಹರಡಿಕೊಂಡಿದೆ.

**◆ ಇಷ್ಟು ದೊಡ್ಡ ಕ್ಯಾನ್ವಾಸಿನ ಸಿನಿಮಾ ಮಾಡುವಾಗ ನಿಮಗೆ ಎದುರಾದ ಸವಾಲುಗಳೇನು?**

ಈ ಕಥೆಯ ವಿಸ್ತಾರ ಬಹಳ ಅಗಾಧವಾಗಿತ್ತು. ಅದನ್ನು ಸಂಕ್ಷಿಪ್ತಗೊಳಿಸಿಕೊಳ್ಳುವುದು ದೊಡ್ಡ ಸವಾಲು ಎನಿಸಿತು. ಇಲ್ಲಿ ನನಗೆ ಬ್ರಿಟನ್ ಎನ್ನುವುದು ಎಲ್ಲ ದೇಶಗಳಂತೆ ಇನ್ನೊಂದು ಪರದೇಶ ಅಲ್ಲ. ಅದಕ್ಕೂ ನಮಗೂ ಬೇರೆ ಬೇರೆ ಥರದ, ಬಹಳ ವಿಚಿತ್ರ ರೀತಿಯಲ್ಲಿ ಥಳಕು ಹಾಕಿಕೊಂಡಿರುವ ಸಂಬಂಧಗಳಿವೆ. ಒಂದು ಕಡೆ ನಮ್ಮನ್ನು ಎರಡು ನೂರು ವರ್ಷ ಆಳಿ, ಜಗಳ ತಂದಿಟ್ಟರು, ಲೂಟಿ ಮಾಡಿದ್ರು, ನಮ್ಮ ದೇಶವನ್ನು ಒಡೆದರು ಎಂಬ ರೀತಿಯ ಆರೋಪಪಟ್ಟಿ ಅವರ ಮೇಲಿದೆ. ಇನ್ನೊಂದು ಕಡೆ ಬ್ರಿಟಿಷರು ಬಂದಿದ್ದರಿಂದ ದೇಶ ಒಂದಾಯಿತು. ಸಾಕಷ್ಟು ಸಾಮಾಜಿಕ ಸುಧಾರಣೆಗಳು, ನಾಗರಿಕ ಸೌಲಭ್ಯಗಳು ಬಂದವು ಎಂಬ ವಾದವೂ ಇದೆ. ಈ ಎರಡೂ ವಾದಗಳ ಬಗ್ಗೆ ಸಾಕಷ್ಟು ಸಂಶೋಧನೆ, ಚರ್ಚೆ ನಡೆದಿವೆ. ಆದರೆ ಸಿನಿಮಾ ಮಾಧ್ಯಮದಲ್ಲಿ ಇದು ಚರ್ಚೆಯಾಗಿಲ್ಲ. ಸಿನಿಮಾದಲ್ಲಿ



'ಇಂಡಿಯಾ ವರ್ಸಸ್ ಇಂಗ್ಲೆಂಡ್' ಸಿನಿಮಾದಲ್ಲಿ ವಸಿಷ್ಠ ಸಿಂಹ ಮತ್ತು ಮಾನ್ವಿತಾ ಕಾಮತ್